KAVP030118442022

Presented on : 10-10-2022
Registered on : 11-10-2022
Decided on : 01-02-2023
Duration : 0 years, 3 months, 22 days

ಮಾನ್ಯ ಐದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ವಿಜಯಪುರ

**ದಿನಾಂಕಃ 1 ನೇ ಫೆಬ್ರುವರಿ 2023**

ಉಪಸ್ಥಿತರು

ಶ್ರೀಮತಿ. ಚಾಂದಿನಿ ಜಿ.ಯು., ಬಿ.ಎ., ಎಲ್. ಎಲ್.ಬಿ.
ಐದನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ನ್ಯಾಯಿಕ ದಂಡಾಧಿಕಾರಿಗಳು
ವಿಜಯಪುರ

**ಖಾಸಗಿ ಫಿರ್ಯಾದು ನಂ. 627/2022**

ಫಿರ್ಯಾದಿದಾರಃ

ಸಿದರಾಯ
ತಂದೆಃ ಅವಧೂತ ಪೂಜಾರಿ,
ವಯಾಃ 78 ವರ್ಷ,
ಉದ್ಯೋಗಃ ಶೇತ್ಕಿ,
ಸಾಃ ಕುಮಠೆ,
ತಾಃ ಬಬಲೇಶ್ವರ,
ಜಿಲ್ಲಾಃ ವಿಜಯಪುರ.

(ಪ್ರತಿನಿಧಿಸಿದವರು ಶ್ರೀ. ಎ. ಎಮ್. ದುಂಡಸಿ ವಕೀಲರು)

ವಿರುದ್ಧ

ಆರೋಪಿತಃ

ಬಿ.ಎಸ್. ಬಿರಾದಾರ
ಹಿರಿಯ ಉಪನೊಂದಣಾಧಿಕಾರಿ,
ಸೊಲ್ಲಾಪೂರ ರೋಡ,
ಕೆ.ಹೆಚ್.ಬಿ ಬಿಲ್ಡಿಂಗ,
ವಿಜಯಪುರ.

ಆದೇಶ

ಪಿರ್ಯಾದುದಾರರು ದಿನಾಂಕ: 10.10.2022 ರಂದು ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 200 ರಡಿಯಲ್ಲಿ ಆರೋಪಿಯ ವಿರುದ್ಧ ಭಾರತಿಯ ದಂಡ ಸಂಹಿತೆಯ ಕಲಂ. 409, 420, 426, 466, 468 ಮತ್ತು 472 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆಂದು ಖಾಸಗಿ ಪಿರ್ಯಾದನ್ನು ದಾಖಲಿಸಿರುತ್ತಾರೆ.

2. ಪಿರ್ಯಾದುದಾರರ ಪಿರ್ಯಾದಿನ ಸಾರಾಂಶ:

ಪಿರ್ಯಾದುದಾರರು ದಿನಾಂಕ: 23.02.2022 ರಂದು ಹಣಮಂತ ತಂದೆ ಅಮೋಘೆಪ್ಪ ಅಲಿಯಾಸ್ ಹೌದಪ್ಪ ಕುಮಟಗಿ ಪೂಜೇರಿ ಇವರಿಂದ ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಕುಮಟಗಿ ಗ್ರಾಮದ ಜಮೀನು ಸರ್ವೇ ಸಂಖ್ಯೆ 176*/5 ಕ್ಷೇತ್ರ 4 ಎಕರೆ 20 ಗುಂಟೆ ಇದರ ಪೈಕಿ ಉತ್ತರ-ದಕ್ಷಿಣವಾಗಿ ಸೀಳಿ ಪೂರ್ವದ ಭಾಗಕ್ಕೆ 2 ಎಕರೆ ಜಮೀನನ್ನು ಖರೀದಿಸುವ ಇಸಾರ ಖರೀದಿ ಕರಾರನ್ನು ಮಾಡಿಕೊಂಡಿದ್ದು, ಸದರಿ ಇಸಾರ ಖರೀದಿ ಕರಾರು ಪತ್ರವನ್ನು ಹಿರಿಯ ಉಪ-ನೊಂದಣಾಧಿಕಾರಿ, ವಿಜಯಪುರ ಕಛೇರಿಯಲ್ಲಿ ನೊಂದಣಿ ಮಾಡಿಸಿದ್ದು, ಜಮೀನಿನ ಒಟ್ಟು ಖರೀದಿ ಬೆಲೆ 10 ಲಕ್ಷ ರೂ.ಗಳಿಗೆ ಒಪ್ಪಂದ ಮಾಡಿಕೊಂಡಿದ್ದು, ಸದರಿ ಹಣದ ಪೈಕಿ ಮುಂಗಡ ಹಣವಾಗಿ 8 ಲಕ್ಷ ರೂ.ಗಳನ್ನು ಕೊಟ್ಟು ಖರೀದಿ ಇಸಾರ ಪತ್ರ ಮಾಡಿದ್ದು ಇರುತ್ತದೆ. ಸದರಿ ಜಮೀನಿನ ಅಳತೆ ಮಾಡಿಸಿ ಹದ್ದೆ ತೋರಿಸಿ, ಕಲ್ಲು ನಡೆಸಿ, ಪೋಡಿ ಆದ ನಂತರ 11 ಇ ನಕಾಶೆ ತಯಾರಾದ ನಂತರ ಮಾಲೀಕ ತಿಳಿಸಿದ ಮೇಲೆ ಖರೀದಿ ಮಾಡಿಕೊಳ್ಳುವ ಕರಾರು ಬಾಕಿ ಇದ್ದು, ಉಳಿದ 2 ಲಕ್ಷ ರೂ.ಗಳನ್ನು ಖರೀದಿ ಹಾಕುವ ಸಮಯದಲ್ಲಿ ನೀಡಲಾಗುತ್ತದೆ ಎಂಬ ಒಪ್ಪಂದವಾಗಿತ್ತು. ಖರೀದಿ ಕರಾರು ಪತ್ರವನ್ನು ಆರೋಪಿಯಾದ ಉಪ-ನೊಂದಣಾಧಿಕಾರಿ ಬಿ.ಎಸ್. ಬಿರಾದಾರ ಇವರ ಸಮುಖದಲ್ಲಿ ಭಾರತೀಯ ನೊಂದಣಿ ಕಾಯ್ದೆ 1908 ಪ್ರಕಾರ ತಗಲುವ ಸರ್ಕಾರಿ ಶುಲ್ಕವನ್ನು ಭರಣ ಮಾಡಿ ಖರೀದಿ ಕರಾರು ಪತ್ರವನ್ನು ನೊಂದಣಿ ಮಾಡಿಸಿರುತ್ತದೆ. ಆದರೆ ಈ ಪ್ರಕರಣದ ಆರೋಪಿಯಾದ ಹಿರಿಯ ಉಪ-ನೊಂದಣಾಧಿಕಾರಿ ದುರುದ್ದೇಶ ಪೂರಕವಾಗಿ ಅಪ್ರಾಮಾಣಿಕತನದಿಂದ ಮೋಸದಿಂದ ಸದರಿ ಸ್ವತ್ತಿಗೆ ಖರೀದಿ ಕರಾರು ಪತ್ರವು ಈಗಾಗಲೇ ಆಗಿದೆಯೆಂದು ತಿಳಿದಿದ್ದರು. ಅದೇ

ಜಮೀನಿನ ಖರೀದಿಯನ್ನು ದಿನಾಂಕಃ 26.07.2022 ರಂದು ಪಕ್ಷಗಾರರಿಂದ ಲಂಚ ಪಡೆದು ಸ್ವತ್ತಿನ ಮಾಲೀಕರಾದ ಅಮೋಘೆಪ್ಪ ಅಲಿಯಾಸ್ ಹೌದಪ್ಪ ಕುಮಟಗಿ ಪೂಜೇರಿರವರಿಂದ ಹಣಮಂತ ತಂದೆ ಯಲ್ಲಪ್ಪ ಜಡೇನವರ ರವರಿಗೆ ಖರೀದಿ ಪತ್ರದ ಮುಖಾಂತರ ನೊಂದಣಿ ಮಾಡಿರುತ್ತಾರೆ. ಆರೋಪಿಯು ಅಪ್ರಾಮಾಣಿಕತನದಿಂದ ದುರುದ್ದೇಶ ಪೂರಕವಾಗಿ ಸದರಿ ಜಮೀನಿನ ಕುರಿತು ಖರೀದಿ ಇಸಾರ ಪತ್ರ ಚಾಲತಿಯಲ್ಲಿದಿದ್ದು, ಚೆನ್ನಾಗಿ ಗೊತ್ತಿದ್ದರು ಸಹ ಕಛೇರಿ ದಾಖಲೆಗಳಲ್ಲಿ ಲಭ್ಯವಿದ್ದುದ್ದನ್ನು ಸರಿಯಾಗಿ ತಿಳಿದು ತಾನೊಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿ ಎನ್ನುವುದನ್ನು ತಿಳಿದು ಸಹ ಖೊಟ್ಟಿ ಖರೀದಿ ಪತ್ರವನ್ನು ತಯಾರಿಸಿರುವುದರಿಂದ ಆರೋಪಿಯು ಭಾರತಿಯ ದಂಡ ಸಂಹಿತೆಯ ಕಲಂ. 409, 420, 426, 466, 468 ಮತ್ತು 472 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆಂದು ಈ ವಿಷಯದ ಕುರಿತು ಸಂಬಂಧಿಸಿದ ಆದರ್ಶ ನಗರ ಪೋಲಿಸ ಠಾಣೆಯಲ್ಲಿ ದೂರನ್ನು ನೀಡಲು ಹೋದಾಗ ಪೋಲೀಸರು ದೂರನ್ನು ಸ್ವೀಕರಿಸಿಲ್ಲ. ನಂತರ ದಿನಾಂಕಃ 22.09.2022 ರಂದು ಪೋಲೀಸ ಅಧೀಕ್ಷಕರು ವಿಜಯಪುರ ರವರಿಗೆ ದೂರನ್ನು ನೀಡಿದರು ಸಹ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ನ್ಯಾಯಾಲಯದ ಮುಂದೆ ಖಾಸಗಿ ಪಿರ್ಯಾದನ್ನು ದಾಖಲಿಸಿದ್ದು, ಆರೋಪಿಯ ವಿರುದ್ಧ ಸೂಕ್ತ ಕಾನೂನಿನ ಕ್ರಮವನ್ನು ಕೈಗೊಂಡು ಶಿಕ್ಷೆಯನ್ನು ವಿಧಿಸಬೇಕೆಂದು ಕೋರಿರುತ್ತಾರೆ.

3. ಪಿರ್ಯಾದುದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಮತ್ತು ನ್ಯಾಯಾಲಯವು ಎಲ್ಲ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1. ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಮುಂದುವರೆಯಲು ಸಾಕಷ್ಟು ಸಕಾರಣಭದ್ಧ ಕಾರಣಗಳಿವೆಯೇ?

2. ಏನು ಆದೇಶ?

4. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ ನಂ.1 - ನಕಾರಾತ್ಮಕವಾಗಿ

ಅಂಶ ನಂ.2 - ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ

## ಕಾರಣಗಳು

5. ಅಂಶ ನಂ.**1-** ಪಿರ್ಯಾದುದಾರರು ಕುಮಟಗಿ ಗ್ರಾಮದಲ್ಲಿರುವ ಸರ್ವೇ ಸಂಖ್ಯೆ 176 ರ 2 ಎಕರೆ ಸ್ವತ್ತನ್ನು ಅದರ ಮಾಲೀಕರಾದ ಅಮೋಘೆಪ್ಪ ಅಲಿಯಾಸ್ ಹೌದಪ್ಪ ಕುಮಟಗಿ ಪೂಜೇರಿರವರಿಂದ ಖರೀದಿಸುವ ಒಪ್ಪಂದವನ್ನು ಮಾಡಿಕೊಂಡಿದ್ದು, ಸ್ವತ್ತನ್ನು 10 ಲಕ್ಷ ರೂ.ಗಳಿಗೆ ಖರೀದಿಸುವ ಒಪ್ಪಂದವಾಗಿದ್ದು, ಸದರಿ ಮೊತ್ತದಲ್ಲಿ 8 ಲಕ್ಷ ರೂ.ಗಳನ್ನು ಮುಂಗಡ ಮೊತ್ತವಾಗಿ ಪಿರ್ಯಾದುದಾರರು ಅಮೋಘೆಪ್ಪ ಅಲಿಯಾಸ್ ಹೌದಪ್ಪ ಕುಮಟಗಿ ಪೂಜೇರಿರವರಿಗೆ ನೀಡಿ ಉಪ-ನೊಂದಣಾಧಿಕಾರಿಗಳ ಕಛೇರಿ ವಿಜಯಪುರದಲ್ಲಿ ಸದರಿ ಖರೀದಿ ಕರಾರು ಪತ್ರವನ್ನು ನೊಂದಣಿ ಮಾಡಿಸಿರುವುದಾಗಿ ತಿಳಿಸಿರುತ್ತಾರೆ. ಈ ಪ್ರಕರಣದ ಆರೋಪಿ ಸದರಿ ಉಪ-ನೊಂದಣಾಧಿಕಾರಿಗಳ ಕಛೇರಿಯ ಹಿರಿಯ ಉಪ-ನೊಂದಣಾಧಿಕಾರಿಯಾಗಿರುತ್ತಾರೆ. ಈ ಆರೋಪಿಯ ಮುಂದೆಯೇ ಖರೀದಿ ಕರಾರು ಪತ್ರದ ನೊಂದಣಿಯಾಗಿರುತ್ತದೆ. ನೊಂದಣಿಯಾಗಿರುವ ವಿಷಯ ತಿಳಿದಿದ್ದರು ಆರೋಪಿಯು ಪಕ್ಷಗಾರರಿಂದ ಲಂಚವನ್ನು ಪಡೆದು ಆರೋಪಿ ಪಿರ್ಯಾದುದಾರರು ಖರೀದಿಸಬೇಕಿದ್ದ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಲು ಸ್ವತ್ತಿನ ಮಾಲೀಕನಿಗೆ ಸಹಾಯ ಮಾಡಿದ್ದು, ಖರೀದಿ ಪತ್ರವನ್ನು ನೊಂದಣಿ ಮಾಡಿರುವುದರಿಂದ ಪಿರ್ಯಾದುದಾರರಿಗೆ ಮೋಸವಾಗಿದೆ ಎಂಬುದು ಪಿರ್ಯಾದುದಾರರ ಪ್ರತಿಪಾದನೆ.

6. ಆರೋಪಿಯು ಆದರ್ಶ ನಗರ ಪೋಲಿಸ ಠಾಣೆಯ ಅಪರಾಧ ಸಂಖ್ಯೆ 61/2022 ರಲ್ಲಿ ಆರೋಪಿತನಾಗಿದ್ದಾನೆ ಎಂದು ತಿಳಿಸಿ ಆರೋಪಿಯ ವಿರುದ್ಧ ದಾಖಲಾಗಿರುವ ದೂರಿನ ಪ್ರಥಮ ವರ್ತಮಾನ ವರದಿಯ ಪ್ರಮಾಣೀಕೃತ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಪಿರ್ಯಾದುದಾರರು ಖರೀದಿ ಕರಾರು ಪತ್ರದ ಯಾವುದೇ ಅಸಲು ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯದ ಕಡತದಲ್ಲಿ ಖರೀದಿ ಕರಾರು ಪತ್ರದ ನಕಲು ಪ್ರತಿ ಮಾತ್ರ ಇರುತ್ತದೆ. ಪಿರ್ಯಾದುದಾರರು ಸರ್ವೇ ಸಂಖ್ಯೆ 176/5 ರ ಕ್ಷೇತ್ರ 2 ಎಕರೆ ಅಂದರೆ ತಾವು ಖರೀದಿಸಬೇಕಿದ್ದ ಸ್ವತ್ತನ್ನು ಹಣಮಂತ ತಂದೆ ಯಲ್ಲಪ್ಪ ಜಡೇನವರ ಎಂಬ ವ್ಯಕ್ತಿ ಖರೀದಿಸಿದ್ದಾರೆಂದು ಸಾಬೀತುಪಡಿಸಲು ಖರೀದಿ

ಪತ್ರದ ಪ್ರಮಾಣೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಸಿ-6 ಎಂದು ಗುರುತಿಸಲಾಗಿರುತ್ತದೆ.

7. ಪಿರ್ಯಾದುದಾರರು ಹಾಜರುಪಡಿಸಿರುವ ಎಲ್ಲಾ ದಾಖಲೆಗಳ ಸಾಕ್ಷ್ಯವನ್ನು ಪೂರ್ಣವಾಗಿ ನ್ಯಾಯಾಲಯವು ಪರಿಶೀಲಿಸಿರುತ್ತದೆ. ಪಿರ್ಯಾದುದಾರರು ಸ್ವತ್ತಿನ ಮೂಲ ಮಾಲೀಕನನ್ನು ಮತ್ತು ಸ್ವತ್ತನ್ನು ಖರೀದಿಸಿದ ವ್ಯಕ್ತಿಯ ವಿರುದ್ಧ ದೂರನ್ನು ನೀಡದೆ ಸದರಿ ಖರೀದಿ ಪತ್ರವನ್ನು ನೊಂದಣಿ ಮಾಡಿದ ಹಿರಿಯ ಉಪ-ನೊಂದಣಾಧಿಕಾರಿಯನ್ನು ಮಾತ್ರ ಆರೋಪಿಯನ್ನಾಗಿ ಮಾಡಿ ಈ ಪ್ರಕರಣವನ್ನು ದಾಖಲಿಸಿದ್ದು, ಹಿರಿಯ ಉಪ-ನೊಂದಣಾಧಿಕಾರಿಯಾದ ಆರೋಪಿ ಪಿರ್ಯಾದುದಾರರಿಗೆ ಮೋಸವನ್ನು ಮಾಡುವ ಉದ್ದೇಶದಿಂದಲೇ ಪಿರ್ಯಾದುದಾರರ ಖರೀದಿ ಕರಾರು ಪತ್ರವನ್ನು ಕಡೆಗಣಿಸಿ ಬೇರೆ ವ್ಯಕ್ತಿಯ ಹೆಸರಿಗೆ ಸದರಿ ಸ್ವತ್ತಿನ ಖರೀದಿ ಪತ್ರವನ್ನು ನೊಂದಣಿ ಮಾಡಿದ್ದಾರೆಂದು ನಿರ್ಣಯಕ್ಕೆ ಬರಲು ಯಾವುದೇ ಪೂರಕ ಸಾಕ್ಷ್ಯವು ಲಭ್ಯವಿರುವುದಿಲ್ಲ. ಪಿರ್ಯಾದುದಾರರು ಸ್ವತ್ತಿನ ಮೂಲ ಮಾಲೀಕರ ವಿರುದ್ಧವಾಗಲೀ ಮತ್ತು ಅದನ್ನು ಖರೀದಿಸಿದ ವ್ಯಕ್ತಿಯ ವಿರುದ್ಧವಾಗಲಿ ಯಾವ ಕಾರಣದಿಂದ ದೂರನ್ನು ದಾಖಲಿಸಲಿಲ್ಲ ಎಂಬ ಕುರಿತು ಯಾವುದೇ ವಿವರಣೆಯು ಪಿರ್ಯಾದುದಾರರಿಂದ ಇರುವುದಿಲ್ಲ. ಸ್ವತ್ತಿನ ಮೂಲ ಮಾಲೀಕನೆ ಸ್ವತ್ತಿನ ಮಾರಾಟವನ್ನು 3 ನೇ ವ್ಯಕ್ತಿಗೆ ಮಾಡಿದ್ದು, ಅದರಲ್ಲಿ ಹಿರಿಯ ಉಪ-ನೊಂದಣಾಧಿಕಾರಿಯಾದ ಆರೋಪಿಯು ಕಛೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂಬ ಒಂದೇ ಆಧಾರದ ಮೇಲೆ ಆರೋಪಿಯ ವಿರುದ್ಧ ಮುಂದುವರೆಯಲು ಸಾಧ್ಯವಿರುವುದಿಲ್ಲ. ಪಿರ್ಯಾದುದಾರರು ಖರೀದಿ ಕರಾರು ಪತ್ರದ ಆಧಾರದ ಮೇಲೆ ತಮ್ಮ ಹಕ್ಕನ್ನು ಸಕ್ಷಮ ಪ್ರಾಧಿಕಾರದ ಮುಂದೆ ಕ್ಲೇಮು ಮಾಡಬಹುದಾಗಿದೆ. ಆರೋಪಿಯ ವಿರುದ್ಧ ಈಗಾಗಲೇ ವಂಚನೆಯ ದೂರು ದಾಖಲಾಗಿದೆ ಎಂಬ ಅಂಶವನ್ನು ಪಿರ್ಯಾದುದಾರರು ನ್ಯಾಯಾಲಯದ ಗಮನಕ್ಕೆ ತಂದರು ಸಹ ಸದರಿ ಅಂಶವು ಈ ಪ್ರಕರಣದಲ್ಲಿ ಅಪ್ರಸ್ತುತವಾಗಿರುತ್ತದೆ. ಸದರಿ ಪ್ರಕರಣವು ಇನ್ನು ಸಹ ತನಿಖೆಯ ಹಂತದಲ್ಲಿರುವುದು ದಾಖಲೆ ಸಾಕ್ಷ್ಯಗಳ ಮೂಲಕ ಸ್ಪಷ್ಟವಾಗಿರುತ್ತದೆ. ಆದ್ದರಿಂದ ಆರೋಪಿಯು ಪಿರ್ಯಾದುದಾರರಿಗೆ ಮೋಸವನ್ನು ಮತ್ತು ಹಾನಿಯನ್ನು ಮಾಡುವ ಉದ್ದೇಶದಿಂದಲೇ ದುರುದ್ದೇಶ ಪೂರ್ವಕವಾಗಿ

ಸರ್ವೆ ಸಂಖ್ಯೆ 176/5 ರ 2 ಎಕರೆ ಸ್ವತ್ತಿನ ಖರೀದಿ ಪತ್ರವನ್ನು ಪಿರ್ಯಾದುದಾರರ ಖರೀದಿ ಕರಾರು ಪತ್ರವು ಚಾಲ್ತಿಯಲ್ಲಿದ್ದಾಗಲೇ ನೊಂದಣಿ ಮಾಡಿದ್ದಾರೆಂದು ನಿರ್ಣಯಕ್ಕೆ ಬರಲು ನ್ಯಾಯಾಲಯದ ಮುಂದೆ ಯಾವುದೇ ಸೂಕ್ತ ಆಧಾರಗಳು ಇರುವುದಿಲ್ಲ. ಆದ್ದರಿಂದ ಈ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

8. <u>ಅಂಶ **2**</u>**-** ಈ ಮೇಲಿನ ಎಲ್ಲ ಅಂಶಕ್ಕೆ ನೀಡಿರುವ ಕಾರಣಗಳನುಸಾರ ಈ ಕೆಳಗಿನ ಆದೇಶವನ್ನು ಮಾಡಿರುತ್ತೇನೆ.

## <u>ಆದೇಶ</u>

ಫಿರ್ಯಾದುದಾರರು ದಂಡ. ಪ್ರಕ್ರಿಯಾ. ಸಂಹಿತೆಯ ಕಲಂ.200 ರಡಿಯಲ್ಲಿ ಆರೋಪಿಯ ವಿರುದ್ಧ ದಾಖಲಿಸಿದ ಖಾಸಗಿ ಫಿರ್ಯಾದನ್ನು ತಿರಸ್ಕರಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿಸಿ, ನಂತರದಲ್ಲಿ ಆದೇಶವನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 01.02.2023 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ಚಾಂದಿನಿ ಜಿ.ಯು)**
ಐದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ
ವಿಜಯಪುರ